ಎಲ್ಲಾ ಬದುಕುತ್ತಿದ್ದಾರೆ. ಅವರು ಕನ್ನಡ ಭಾಷೆ ಕಲಿತಿಲ್ಲ ಎಂದು ಹೇಳತಕ್ಕಂಥ ನಿಯತ್ತೇ ಇಲ್ಲದಿರತಕ್ಕಂಥ ಜನ ಕನ್ನಡ ನಾಡಿನಲ್ಲಿ ಯಾವುದಕ್ಕೆ ಆಗಲಿ ಅವರು ಇರಲು ಅರ್ಹರೇ ಅಲ್ಲ. ಯಾವುದೇ ಇರಬಹುದು. ಸರಕಾರಿ ಕೆಲಸಕ್ಕಾಗಲಿ ಬೇರೆ ರೀತಿ ಕೆಲಸಕ್ಕಾಗಲೀ, ಯಾರುದೇ ರೀತಿಯ ಒಂದು ಅನುಕಂಪಕ್ಕೆ ಅವರು ಅರ್ಹರಲ್ಲ ಎನ್ನತಕ್ಕಂಥ ಮಾತನ್ನು ಈ ಸಭೆಯ ಮುಖಾಂತರ ಹೇಳಬೇಕಾಗಿ ಬರುತ್ತದೆ. ದಯವಿಟ್ಟು ಅವರು ಮೊದಲು ಕನ್ನಡ ಕಲಿಯಬೇಕು.

ಶಾಸನಾ ರಚನಾ ಕಾರ್ಯಕಲಾಪಗಳು

1993ರ ಕರ್ನಾಟಕ ಧನವಿನಿಯೋಗ ವಿಧೇಯಕ, ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, 1993ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಈ ಸಬೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷಣೆಯವರು : ಪ್ರಸ್ತಾಪ ಏನೆಂದರೆ : "1993ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, 1993ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1993ರ ಕರ್ನಾಟಕ ಧನವಿನಿಯೋಗ ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು): ಉಪಾಧ್ಯಕ್ಷಣೆಯವರೇ, 1993ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ಮತ್ತು 3

ಉಪಾಧ್ಯಕ್ಷಣೆಯವರು : "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ : ಮೊದಲನೇಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ, ಶೀರ್ಷಿಕೆ, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು) : 1993ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಣಿಯವರು : ಪ್ರಸ್ತಾವನೆ ಏನೆಂದರೆ "1993ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸುವುದು.

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ಪ್ರಕಟಣೆ

ಗೈರು ಹಾಜರಿಗೆ ಅನುಮತಿ ಕೋರಿಕೆ

ಉಪಾಧ್ಯಕ್ಷಣಿಯವರು : ಸನ್ಮಾನ್ಯ ಸದಸ್ಯರಾದೇ ಶ್ರೀ ಎಸ್.ವಿ. ಅಶ್ವತ್ಥನಾರಾಯಣರೆಡ್ಡಿ ಅವರು ದಿನಾಂಕ 5-1-93ರಂದು ಬರೆದ ಪತ್ರದಲ್ಲಿ ಅವರು ದಿನಾಂಕ 28-12-92ರಿಂದ ಅನಾರೋಗ್ಯದ ಪ್ರಯುಕ್ತ ಚಿಕಿತ್ಸೆ ಪಡೆಯುತ್ತಿರುವುದರಿಂದ ಪ್ರಸಕ್ತ ಅಧಿವೇಶನದಲ್ಲಿ ಪಾಲ್ಗೊಳ್ಳಲು ಆಗದೆ ಇರುವುದರಿಂದ ಅವರು ದಿನಾಂಕ 28-12-92ರಿಂದ ಗೈರು ಹಾಜರಿ ಕೋರಿ ಸದನದ ಅನುಮತಿಯನ್ನು ಕೇಳಿರುತ್ತಾರೆ.

ಶ್ರೀ ವಿ.ಎಸ್. ಅಶ್ವತ್ಥನಾರಾಯಣ ರೆಡ್ಡಿಯವರು ಮೇಲಿ ಸೂಚಿಸಿದ ಅವಧಿಯಲ್ಲಿ ಸದನದಲ್ಲಿ ಗೈರು ಹಾಜರಾಗಲು ಅನುಮತಿ ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ ?

ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ.

ಉಪಾಧ್ಯಕ್ಷಣಿಯವರು : ಶ್ರೀ ಎಸ್.ವಿ. ಅಶ್ವತ್ಥನಾರಾಯಣರೆಡ್ಡಿಯವರಿಗೆ ಗೈರು ಹಾಜರಾಗಲು ಅನುಮತಿ ನೀಡಲಾಯಿತು.

ನಂತರ ಶ್ರೀ ಎಸ್. ಬಂಗಾರಪ್ಪ ಸರ್ಕಾರದ ಬಗ್ಗೆ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಮಂಡಿಸಿದ ನಿಲುವಳಿ ಸೂಚನೆ ಹಾಗೂ ಶ್ರೀ ಆರ್ ವಿ. ದೇಶಪಾಂಡೆ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಮಾನ್ಯ ಇತರೆ ಸದಸ್ಯರು ನಿಯಮ 68ರ ಮೇರೆಗೆ ತಂದ ಪ್ರಸ್ತಾವದ ಬಗ್ಗೆ

+ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೇ, ನಮ್ಮ ನಿಲುವಳಿ ಸೂಚನೆಗೆ ತಾವು ಅವಕಾಶ ಕೊಟ್ಟಿಲ್ಲ. ನಿಮ್ಮ ಬಗ್ಗೆ ನನಗೆ ಸಾಕಷ್ಟು ಗೌರವ ಇದೆ. ರೂಲ್ 68ರ ಪ್ರಕಾರ ತಾವು ನಿರ್ಣಯ ಕೊಟ್ಟರೆ ಅದು ತಪ್ಪಾಗುತ್ತದೆ. ನಾನು ಬೇಕಾದರೆ ರೂಲ್ಸ್ ಕ್ವೋಟ್ ಮಾಡಬಹುದು. ತಾವು